ಚುಳಕಿನಾಲಾ ಯೋಜನೆಯು ಪೂರ್ಣಗೋಂಡಿದ್ದು, ನಿರ್ವಹಣೆಯನ್ನು 2013–14 ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿದ್ದು, ಪ್ರಸಕ್ತ 2014–15ನೇ ಸಾಲಿನಲ್ಲಿ ಸದರಿ ಯೋಜನೆಯ ನಿರ್ವಹಣೆಗೆ ₹ 4.09 ಕೋಟಿಗಳ ಅನುದಾನ ಒದಗಿಸಲಾಗಿದೆ.

ಉ) ಸರ್ಕಾರವು ಈ ಯೋಜನೆಗಳ ಅನುಷ್ಠಾನ/ನಿರ್ವಹಣೆ ಚುರುಕುಗೊಳಿಸುವ ನಿಟ್ಟಿನಲ್ಲಿ 2013–14 ನೇ ಸಾಲಿನಲ್ಲಿ ಕರ್ನಾಟಕ ನೀರಾವರಿ ನಿಗಮಕ್ಕೆ ಹಸ್ತಾಂತರಿಸಿರುತ್ತದೆ.

ಕಾರಂಜಾ ಯೋಜನೆಯನ್ನು ಪ್ರಸಕ್ತ 2014–15ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಚುಳುಕಿನಾಲಾ ಯೋಜನೆಯು ಪೂರ್ಣಗೊಂಡಿದ್ದು, ಕಾಲುವೆಗಳ ನಿರ್ವಹಣೆ/ದುರಸ್ತಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವುದು

4119(4854); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಜನ ಬಾಲ ಕಾರ್ಮಿಕರು ಪತ್ತೆಯಾಗಿದ್ದಾರೆ (ವಿವರ ನೀಡುವುದು)?

ಆ) ಪತ್ತೆಯಾದ ಬಾಲ ಕಾರ್ಮಿಕರ ಪುನರ್ವಸತಿಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ;

ಇ) ಈ ಜಿಲ್ಲೆಯಲ್ಲಿ ಇದುವರೆವಿಗೂ ಬಾಲ ಕಾರ್ಮಿಕ ನಿರ್ಮೂಲನೆ ಅಡಿಯಲ್ಲಿ ಎಷ್ಟು ದೂರುಗಳು ದಾಖಲಾಗಿದೆ (ವಿವರ ನೀಡುವುದು)?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ 2011–12ರ ಸಮೀಕ್ಷೆ ಮೂಲಕ 2560 ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಲಾಗಿದೆ. ತಾಲ್ಲೂಕುವಾರು ವಿವರಗಳನ್ನು 'ಅನುಬಂಧ–ಅ' ನಲ್ಲಿ ಒದಗಿಸಿದೆ.

ಆ) ರಾಜ್ಯದಲ್ಲಿ ಬಾಲ ಕಾರ್ಮಿಕರ ಪುನರ್ವಸತಿಗೋಸ್ಕರ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ ಮತ್ತು ರಾಜ್ಯ ಬಾಲಕಾರ್ಮಿಕ ಕ್ರಿಯಾಯೋಜನೆ ಎಂಬ ಎರಡು ಯೋಜನೆಗಳು ಜಾರಿಯಲ್ಲಿರುತ್ತವೆ. ಕ್ರಿಯಾಯೋಜನೆಯನ್ನು ಜಾರಿಗೆ ತರಲು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಡಿಸ್ಟ್ರೇಕ್ಟ್ ಚೈಲ್ಡ್ ಲೇಬರ್ ಪ್ರಾಜೆಕ್ಟ್ ಸೊಸೈಟಿ ಸ್ಥಾಪಿಸಲಾಗಿರುತ್ತದೆ. ರಾಜ್ಯ ಸರ್ಕಾರ ಬಾಲಕಾರ್ಮಿಕರ ಪುನರ್ವಸತಿಗೋಸ್ಕರ ಅನುದಾನವನ್ನು ಕಾರ್ಮಿಕ ಇಲಾಖೆಗೆ ಹಂಚಿಕೆ ಮಾಡುತ್ತಿದ್ದು, ಆಯಾಯ ಜಿಲ್ಲೆಗಳ ಅಗತ್ಯಕ್ಕನುಗುಣವಾಗಿ ಜಿಲ್ಲಾಧಿಕಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. ಬೀದರ್ ಜಿಲ್ಲೆಯು ರಾಜ್ಯ ಬಾಲಕಾರ್ಮಿಕ ಕ್ರಿಯಾ ಯೋಜನೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈ ಯೋಜನೆಯಡಿಯಲ್ಲಿ ಬಾಲಕಾರ್ಮಿಕರಿಗೋಸ್ಕರ ನಡೆಯುವ ಶಾಲೆಗಳು ವಿಶೇಷ ವಸತಿ ಶಾಲೆಗಳಾಗಿರುತ್ತವೆ. ಈ ಶಾಲೆಗಳು ವರ್ಷಪೂರ್ತಿ ನಡೆಯುವ ಶಾಲೆಗಳಾಗಿರುತ್ತವೆ. ಪತ್ತೆ ಹಚ್ಚಲಾದ ಬಾಲಕಾರ್ಮಿಕರನ್ನು ಪುನರ್ವಸತಿಗೊಳಿಸುವ ಸಲುವಾಗಿ ಸರ್ಕಾರೇತರ ಸಂಸ್ಥೆಗಳ ಮೂಲಕ ವಿಶೇಷ ವಸತಿ ಶಾಲೆಗಳನ್ನು ನಡೆಸಲಾಗುತ್ತದೆ. ವಿಶೇಷ ವಸತಿ ಶಾಲೆಗಳಿಗೆ ತಗಲುವ ಪೂರ್ತಿ ಖರ್ಚನ್ನು ಸರ್ಕಾರ ಭರಿಸುತ್ತದೆ. ಬಾಲಕಾರ್ಮಿಕರಿಗೆ ಉಚಿತ ಆಹಾರ, ಸಮವಸ್ತ್ರ, ಪಠ್ಯಪುಸ್ತಕ, ಆರೋಗ್ಯ ತಪಾಸಣೆ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ.

ಅಪಾಯಕಾರಿ ಕೆಲಸಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬಾಲಕಾರ್ಮಿಕರನ್ನು ಕೆಲಸದಿಂದ ಬಿಡುಗಡೆಗೊಳಿಸಿದ್ದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನ್ವಯ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರಿಂದ ಪ್ರತಿ ಬಾಲಕಾರ್ಮಿಕಿಗೆ ₹ 20,000/–ಗಳ ಪರಿಹಾರವನ್ನು ವಸೂಲಿ ಮಾಡಿ ಜಿಲ್ಲೆಗಳಲ್ಲಿ ಸ್ಥಾಪಿಸಲಾಗಿರುವ 'ಕಾರ್ಪಸ್ ನಿಧಿ'ಯಲ್ಲಿ ತೇವಣಿ ಮಾಡಲಾಗುತ್ತಿದೆ. ಅಲ್ಲದೆ, ಅವಶ್ಯಕತೆಗನುಗುಣವಾಗಿ ಕುಟುಂಬದ ಓರ್ವ ಸದಸ್ಯನಿಗೆ

ಉದ್ಯೋಗವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಉದ್ಯೋಗ ಒದಗಿಸಲು ರಾಜ್ಯ ಸರ್ಕಾರ ವಿಫಲವಾದಲ್ಲಿ ಪತ್ರಿ ಪ್ರಕರಣಕ್ಕೆ ₹ 5,000/– ಗಳನ್ನು ಕಾರ್ಪಸ್ ನಿಧಿಗೆ ತೇವಣಿ ಮಾಡಲಾಗುತ್ತದೆ. ₹ 20,000/– ಅಥವಾ ₹ 25,000/– ಗಳಿಂದ ಬರುವ ಬಡ್ಡಿಯನ್ನು ಬಾಲಕಾರ್ಮಿಕನ ಕುಟುಂಬಕ್ಕೆ ಪರಿಹಾರವಾಗಿ ನೀಡಲಾಗುತ್ತಿದೆ.

ಇ) ಬೀದರ್ ಜಿಲ್ಲೆಯಲ್ಲಿ 2001 ರಿಂದ 2014 ರವರೆಗೆ ಸ್ವೀಕರಿಸಲಾದ ದೂರುಗಳ ವಿವರಗಳನ್ನು ಅನುಬಂಧ–ಅ ನಲ್ಲಿ ಒದಗಿಸಿದೆ. ಅಲ್ಲದೇ ತೆಗೆದುಕೊಂಡ ಕ್ರಮಗಳ ವಿವರಗಳು ಸದರಿ ಅನುಬಂಧದಲ್ಲಿ ಒಳಗೊಂಡಿರುತ್ತದೆ.

ಅನುಬಂಧ-ಆ

ಬೀದರ್ ಜಿಲ್ಲೆಯಲ್ಲಿ 2002-03ನೇ ಸಾಲಿನಿಂದ ಇದುವರೆಗೂ ದಾಖಲಾಗಿರುವ ಬಾಲಕಾರ್ಮಿಕ ದೂರುಗಳ ವಿವರ

ಕ್ರ ಸಂ.	ಬಾಲಕಾರ್ಮಿಕರ ಬಗ್ಗೆ ಬಂದಿರುವ ದೂರುಗಳು	ಬಂದಿರುವ ದೂರುಗಳ ಸಂಖ್ಯೆ	ಕೈಗೊಂಡ ಕ್ರಮ
1	ಸ್ಥಿರ ದೂರವಾಣಿ ಮೂಲಕ ಬಂದಿರುವ ದೂರುಗಳು	15 ಕರೆಗಳು	ಆನಾಮಧೇಯ ಕರೆಗಳನ್ನು ಸ್ವೀಕರಿಸಿ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಚೈಲ್ಡ್ ಲೈನ್ ಕೊ-ಆರ್ಡಿನೇಟರ್ಸ್ ತಂಡದೊಂದಿಗೆ ತೆರಳಿ 06 ಬಾಲಕಾರ್ಮಿಕರನ್ನು ಪತ್ತೆ ಹಚ್ಚಲಾಯಿತು. ಆ ಮಕ್ಕಳನ್ನು ಶಾಲೆಗೆ ಸೇರಿಸಿ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.
2	ಬಾಲಕಾರ್ಮಿಕರ ಬಗ್ಗೆ ಮೊಬೈಲ್ ಫೋನಗೆ ಬಂದಿರುವ ದೂರುಗಳು	5 ಕರೆಗಳು	ನಾಮಧೇಯ ಕರೆಗಳನ್ನು ಸ್ವೀಕರಿಸಿ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಚೈಲ್ಡ್ ಲೈನ್ ಕೊ-ಆರ್ಡಿನೇಟರ್ಸ್ ತಂಡದೊಂದಿಗೆ ತೆರಳಿ 02 ಬಾಲಕಾರ್ಮಿಕರನ್ನು ಪತ್ತೆ ಹಚ್ಚಲಾಯಿತು. ಆ ಮಕ್ಕಳನ್ನು ಶಾಲೆಗೆ ಸೇರಿಸಿ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.
3	ಲಿಖಿತ ರೂಪದಲ್ಲಿ ಬಂದಿರುವ ದೂರುಗಳು	02	1.ಆನಾಮಧೇಯ ಪತ್ರ : ಗ್ರಾಮ ಬೆಳ್ಳೂರು ಪಾದೇರ ಇಲ್ಲಿ ಬಾಲಕಾರ್ಮಿಕರಿಯವ ಬಗ್ಗೆ ಅನಾಮದೇಯ ದೂರು ಬಂದಿದ್ದು , ಯೋಜನಾ ನಿರ್ದೇಶಕರು, ಬೀದರ್ ಜಿಲ್ಲಾ ಬಾಲಕಾರ್ಮಿಕ ಸೊಸೈಟಿ, ಬೀದರ್ ಇವರು ಆಲ್ಲಿಗೆ ತೆರಳಿ ವಿಚಾರಿಸಲಾಗಿದ್ದು ಆ ಮಗುವು 7ನೇ ತರಗತಿಯಲ್ಲಿ ಶಾಲೆಗೆ ಹೋಗುತ್ತಿದ್ದು ಅಕ್ಟೋಬರ್ ತಿಂಗಳಿನ ದಸರಾ ರಜೆಯಲ್ಲಿ 03-04 ದಿವಸ ಕೆಲಸ ಮಾಡಿದ್ದು ತಿಳಿದು ಬಂದಿರುತ್ತದೆ. ನಂತರ ಪೋಷಕರಿಗೆ ಆ ಮಗುವನ್ನು ಶಾಲೆಗೆ ಕಳುಹಿಸುವಂತೆ ತಿಳಿಹೇಳಲಾಯಿತು. 2. ಶ್ರೀ: ಮಲ್ಲಿಕಾರ್ಜುನ ಖೂಬಾ, ಮಾನ್ಯ ವಿಧಾನ ಸಭಾ ಸದಸ್ಯರು, ಬಸವಕಲ್ಯಾಣ ಮಾನ್ಯ ಶಾಸಕರು ಲಿಖಿತವಾಗಿ ಜಿಲ್ಲಾಧಿಕಾರಿಗಳ ಮೂಲಕ ದೂರು ನೀಡಿದ್ದು, ದೂರನ್ನು ಸ್ವೀಕರಿಸಿ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರು ಮತ್ತು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಚೈಲ್ಡ್ ಲೈನ್ ಕೊ-ಆರ್ಡಿನೇಟರ್ಸ್ ತಂಡದೊಂದಿಗೆ ತೆರಳಿ 05 ಬಾಲಕಾರ್ಮಿಕರನ್ನು ಪತ್ತೆ ಹಚ್ಚಲಾಯಿತು. ಪತ್ತೆ ಹಚ್ಚಲಾದ ಬಾಲಕಾರ್ಮಿಕರನ್ನು ಶಾಲೆಗೆ ಸೇರಿಸಿ ಮಾಲೀಕರ ವಿರುದ್ಧ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ-ಅ

ಕ್ರಮ ಸಂ	ತಾಲ್ಲೂಕಿನ ಹೆಸರು	ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ಒಟ್ಟು ಹಳ್ಳಿಗಳ ಸಂಖ್ಯೆ		ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ಒಟ್ಟು ಹಳ್ಳಿಗಳಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಹೊಂದಿರುವ ಹಳ್ಳಿಗಳ ಸಂಖ್ಯೆ		ಪರಿಶಿಷ್ಟ ಜಾತಿ (SC)		ಪರಿಶಿಷ್ಟ ಪಂಗಡ (ST)		ಇತರೆ ಹಿಂದುಳಿದ ವರ್ಗ (OBC)		ಸಾಮಾನ್ಯ ವರ್ಗ (Others)		ಸುರುತಿಸಲಾದ ಒಟ್ಟು ಹಳ್ಳಿಗಳ ಸಂಖ್ಯೆ		ಒಟ್ಟು ಸುರುತಿಸಲಾದ ಹಳ್ಳಿಗಳ ಸಂಖ್ಯೆ
		ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	ಗಂಡು	ಹೆಣ್ಣು	
01	02	03	04	05	06	07	08	09	10	11	12	13	14	15	16	17
1	ಮೊದಲ	495	166	0	0	171	98	60	30	128	26	90	12	449	166	615
2	ಎರಡನೆಯದು	187	80	23	18	93	32	42	30	41	19	35	16	211	97	308
3	ಮೂರನೆಯದು	314	118	80	23	120	45	128	69	65	14	77	19	391	147	538
4	ನಾಲ್ಕನೆ	480	336	3	3	299	196	46	30	89	67	47	41	479	333	812
5	ಐದು	365	85	9	26	96	49	28	12	41	38	10	13	175	112	287
	ಒಟ್ಟು	1396	783	115	69	779	419	302	171	365	164	259	101	1705	855	2560